ಅ) ಹಿಂದಿರುಗಿದ್ದರೆ, ಕಾರಣಗಳೇನು?

ಇ) ಇದುವರೆಗೆ ಇದಕ್ಕಾಗಿ ಖರ್ಚಾದ ಒಟ್ಟು ಮೊತ್ತ ಎಷ್ಟು?

ಶ್ರೀ ಚೌಡರೆಡ್ಡಿ (ಗೃಹ ಮಂತ್ರಿಗಳು) :

ಅ) ವೀರಪ್ಪನ್ ಮತ್ತು ಅವನ ಸಹಚರರ ಬಂಧನದ ಕಾರ್ಯದಲ್ಲಿ ಕರ್ನಾಟಕ ವಿಶೇಷ ಕಾರ್ಯಾಚರಣೆ ಪಡೆಗೆ ನೆರವಾಗಲು ದಿನಾಂಕ : 5-6-93 ರಂದು ಗಡಿಭದ್ರತಾ ಪಡೆಯ 5ಕಂಪನಿಗಳ ಸೇವೆಯನ್ನು ಪಡೆಯಲಾಗಿತ್ತು. ಅವುಗಳಲ್ಲಿ ಮೂರು ಕಂಪನಿಗಳನ್ನು ದಿನಾಂಕ : 9-3-94ರಂದು ಹಿಂದಿರುಗಿಸಲಾಗಿದೆ. ಎರಡು ಕಂಪನಿಗಳು ಇನ್ನೂ ಉಳಿದಿದ್ದು ಕಾರ್ಯಾಚರಣೆಯಲ್ಲಿ ತೊಡಗಿವೆ.

ಆ) ಕಾರ್ಯಾಚರಣೆ ಪಡೆಯು ದಿನಾಂಕ : 190-4-93 ರಿಂದ 9-3-94ರ ವರೆಗೆ ನಡೆಸಿದ ಕಾರ್ಯಾಚರಣೆಯ ಅವಧಿಯಲ್ಲಿ, ವೀರಪ್ಪನ್ ತಂಡದ ಬಲವನ್ನು 150 ರಿಂದ 8 ಸದಸ್ಯರಿಗೆ ಇಳಿಸಲಾಯಿತು. ಅದೇ ರೀತಿ ಶಸ್ತ್ರಗಳ ಸಂಖ್ಯೆಯನ್ನು 150 ರಿಂದ 7ಕ್ಕೆ ಇಳಿಸಲಾಯಿತು. ಆದ್ದರಿಂದ, ಐದು ಕಂಪನಿಗಳ ಸೇವೆ ಅನಾವಶ್ಯಕ ಎಂದು ಕಂಡು ಬಂದಿದ್ದರಿಂದ, ಕೇವಲ ಎರಡು ಕಂಪನಿಗಳನ್ನು ಇಟ್ಟುಕೊಂಡು, ಮೂರು ಕಂಪನಿಗಳನ್ನು ವಾಪಸ್ ಕಳುಹಿಸಲಾಗಿದೆ.

ಇ) ಗಡಿ ಭದ್ರತಾ ಪಡೆಯ ಸೇವೆಯನ್ನು ದಿನಾಂಕ 5-6-1993 ರಿಂದ 31-7-1994ರವರೆಗಿನ ಅವಧಿಯಲ್ಲಿ ಪಡೆದಿದ್ದಕ್ಕಾಗಿ, ಒಟ್ಟು 1 ಕೋಟಿ 15 ಲಕ್ಷ ರೂಪಾಯಿಗಳ ಮೊತ್ತವನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿದೆ.

ಬೆಂಗಳೂರು ನಗರದಲ್ಲಿ ಏಕಮುಖ ಸಂಚಾರದ ವ್ಯವಸ್ಥೆ

212 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಹಲವಾರು ರಸ್ತೆಗಳನ್ನು 'ಏಕಮುಖ ಸಂಚಾರ' ಮಾಡಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು.

ಆ) ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂಬುದು ಗಮನಕ್ಕೆ ಬಂದ ತಕ್ಷಣವೇ ಏಕಮುಖ ಸಂಚಾರದಲ್ಲಿ ಕೆಲವು ಮಾರ್ಪಾಡು ಮಾಡಲಾಗಿದೆ.

ಬೆಂಗಳೂರಿನಿಂದ - ತುಮಕೂರಿಗೆ ಬರುವ ಸರ್ಕಾರಿ ಬಸ್ಸು ತುಮಕೂರು ಎಚ್.ಎಂ.ಟಿ. ಗೇಟ್ ಹತ್ತಿರ ಸ್ಟಾಪ್ ಕೊಡುವ ಬಗ್ಗೆ

172 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಿಂದ - ತುಮಕೂರಿಗೆ ಬರುವ ಸರ್ಕಾರಿ ಬಸ್ಸು ತುಮಕೂರು ಎಚ್.ಎಂ.ಟಿ. ಗೇಟ್ ಹತ್ತಿರವಿರುವ ಗೋಕುಲ ಎಕ್ಸ್‌ಟೆನ್‌ಷನ್‌ನಲ್ಲಿ ನಿಲುಗಡೆ ಮಾಡದೆ ಇರುವ ಪ್ರಯುಕ್ತ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :